ಕರ್ನಾಟಕ ಸರ್ಕಾರ, ಕಂದಾಯ ಇಲಾಖೆ.

OFFICE OF THE DEPUTY COMMISSIONER, SHIMOGA DISTRICT,SHIMOGA.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ದೂರವಾಣಿ/PHONE: - 08182-271101/221010/222082; ಫ್ಯಾಕ್ಸ್/FAX: - 277082; ಇ-ಮೇಲ್/E-MAIL: - deo.shimoga@gmail.com

ನಂ:SMGDC-LAQ/LAQN/03/2021(E-64189) ದಿನಾಂಕ:01-03-2021

ಗೆ,

ಕಾರ್ಯಪಾಲಕ ಅಭಿಯಂತರರು,

ವಿಶೇಷ ವಿಭಾಗ,

ಲೋಕೋಪಯೋಗಿ ಬಂದರು ಮತ್ತು

ಒಳನಾಡು ಜಲಸಾರಿಗೆ ಇಲಾಖೆ,

ಶಿವಮೊಗ್ಗ.

ಸಂಖ್ಯೆ: ಕಾ.ಇಂ./ಲೋ.ಇ.ವಿ.ವಿ.ಶಿ/ AE-1/2021-22 18 ದಿನಾಂಕ 01-04-21
ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲೋ.ಇ.ಉಪವಿಭಾಗ ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ
ಇವರಿಗೆ ...........................................

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಶಿವಮೊಗ್ಗ

ಮಾನ್ಯರೇ,

ವಿಷಯ: ಶಿವಮೊಗ್ಗ ತಾಲ್ಲೂಕು ಸೋಗಾನೆ ವಿಮಾನ ನಿಲ್ದಾಣವು ರಾತ್ರಿ ವೇಳೆ ಕಾರ್ಯಾಚರಣೆ (ILS Landing) ಮಾಡುವ ಸಲುವಾಗಿ Runway ಉದ್ದವನ್ನು ಹೆಚ್ಚಿಸುವ ಸಲುವಾಗಿ ಹೆಚ್ಚುವರಿಯಾಗಿ 8-01 ಎಕರೆ ಜಮೀನನ್ನು ಭೂಸ್ವಾಧೀನಕ್ಕೆ ಕೋರಿರುವ ಕುರಿತು.

| | |
|---|---|
| ಶಾಖೆ | |
| ಅಧೀಕ್ಷಕರು | |
| ಪ್ರ.ದ.ಸ. | |
| ಕಾಂ.ಸ. | 19/03 |
| ಕಾ.ಇಂ. | 20 |

ಉಲ್ಲೇಖ:

1. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ರವರ ಪತ್ರ ಸಂಖ್ಯೆ ಕಾಇಂ/ಲೋಇ/ವಿವಿಶಿ/ವಿಮಾಣ/ಸ.ಇಂ-1/2020-21 ದಿನಾಂಕ: 19-12-2020.
2. ಉಪವಿಭಾಗಾಧಿಕಾರಿಗಳು ಶಿವಮೊಗ್ಗ ರವರ ಪತ್ರ ಸಂಖ್ಯೆ : ಎಲ್.ಎನ್.ಡಿ/ಸಿಆರ್ 02/20-21 ದಿನಾಂಕ: 26-02-2021.

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಂತೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ರವರು ಶಿವಮೊಗ್ಗ ತಾಲ್ಲೂಕು ಸೋಗಾನೆ ವಿಮಾನ ನಿಲ್ದಾಣವು ರಾತ್ರಿ ವೇಳೆ ಕಾರ್ಯಾಚರಣೆ (ILS Landing) ಮಾಡುವ ಸಲುವಾಗಿ Runway ಉದ್ದವನ್ನು ಹೆಚ್ಚಿಸುವ ಸಲುವಾಗಿ ಹೆಚ್ಚುವರಿಯಾಗಿ 8-01 ಎಕರೆ ಜಮೀನನ್ನು ಭೂಸ್ವಾಧೀನಕ್ಕೆ ಕೋರಲಾಗಿರುತ್ತದೆ.

ಅದರಂತೆ ಈ ಕುರಿತು ಪರಿಶೀಲಿಸಲಾಗಿ, ಸದರಿ ಜಮೀನು ಕೇಂದ್ರ ಬಂಧೀಖಾನೆಗೆ ನಿರ್ಮಿಸಿರುವ ಸಂಪರ್ಕ ರಸ್ತೆ ದಾಟಿ ಮುಂದೆ ಭದ್ರಾವತಿ ತಾಲ್ಲೂಕು ಸಿರಿಯೂರು ಗ್ರಾಮದ ಸ.ನಂ 12 ರಲ್ಲಿ ಇದ್ದು, ಸದರಿ ಸರ್ವೆ ನಂಬರು ಅರಣ್ಯ ಇಲಾಖೆಗೆ ಸೇರಿದ್ದು ಹಾಲಿ MPM ಕಾರ್ಖಾನೆಗೆ ನೆಡುತೋಪಿಗಾಗಿ ನೀಡಿರುವ ಜಮೀನಾಗಿರುತ್ತದೆ. ಈ ಹೆಚ್ಚುವರಿ ಭೂಸ್ವಾಧೀನದಿಂದ ಕೇಂದ್ರ ಬಂಧಿಖಾನೆಗೆ ನಿರ್ಮಿಸಿರುವ ಸಂಪರ್ಕ ರಸ್ತೆ ಕಡಿದು ಹೋಗುವುದರಿಂದ ರಸ್ತೆ

ನಂ. 4460

PDF processed with CutePDF evaluation edition www.CutePDF.com

ನಿರ್ಮಾಣಕ್ಕಾಗಿಯೂ ಸಹ ಭೂಸ್ವಾಧೀನ ಅವಶ್ಯಕತೆ ಇರುತ್ತದೆ. ಅದ್ದರಿಂದ ಉಲ್ಲೇಖ(1)ರ ಪತ್ರದಂತೆ ಕೋರಿರುವ ಜಮೀನು ಸೇರಿ ಒಟ್ಟು 11-31 ಎಕರೆ MPM ಕಾರ್ಖಾನೆಗೆ ಹಸ್ತಾಂತರಿಸಿರುವ ಅರಣ್ಯ ಇಲಾಖೆಯ ಜಮೀನಿಗೆ ಅರಣ್ಯ ಇಲಾಖೆಯಿಂದ ಫಾರೆಸ್ಟ್ ಕ್ಲೀಯರನ್ಸ್ (Forest Clearance) ಪಡೆದು ನಿಯಮಾನುಸಾರ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,

K. B.

ಜಿಲ್ಲಾಧಿಕಾರಿ,

ಶಿವಮೊಗ್ಗ ಜಿಲ್ಲೆ.

ಕರ್ನಾಟಕಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

OFFICE OF THE DEPUTY COMMISSIONER, SHIVAMOGGA DISTRICT, SHIVAMOGGA.

ದೂರವಾಣಿ/PHONE: - 08182-271101/221010/222082;ಫ್ಯಾಕ್ಸ್/FAX: - 277082; ಇ-ಮೇಲ್/E-MAIL: - deo.shimoga@gmail.com

ನಂ.SMGDC-LND(1)LG1/77/2020(E-94668) ದಿನಾಂಕ: 30.03.2022

ವಿಷಯ: ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದಲ್ಲಿನ ವಿಮಾನ ನಿಲ್ದಾಣದ ರಾತ್ರಿ ವೇಳೆಯ ಕಾರ್ಯಾಚರಣೆಯ ಸಂಬಂಧ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ಬದಲಾಗಿ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿ ಎಮ್ಮೆದೊಡ್ಡಿ ಗ್ರಾಮದ ಸರ್ವೆ ನಂ:02, 03, 04 ರಲ್ಲಿನ ಒಟ್ಟು 25.05 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ಮಂಜೂರಾತಿ ಮಾಡುವ ಕುರಿತು.

ಉಲ್ಲೇಖ:
1. ಉಪ-ವಿಭಾಗಾಧಿಕಾರಿಗಳು, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ ಇವರ ಪತ್ರ ಸಂಖ್ಯೆ: SMG–AC-LND CR/MISC/60/2021 (ಇ-76416) ದಿನಾಂಕ:02.03.2022.
2. ತಹಶಿಲ್ದಾರ್, ಭದ್ರಾವತಿ ತಾಲ್ಲೂಕು ಇವರ ವರದಿ ಪತ್ರ ಸಂಖ್ಯೆ: BDVT.LND.CR-135/2021-22 ದಿನಾಂಕ:01.03.2022

*****

**ಪ್ರಸ್ತಾವನೆ:-**

ಶಿವಮೊಗ್ಗ ತಾಲ್ಲೂಕು, ಸೋಗಾನೆ ಗ್ರಾಮದಲ್ಲಿ ವಿಮಾನ ನಿಲ್ದಾಣದ ರಾತ್ರಿ ವೇಳೆ ಕಾರ್ಯಾಚರಣೆಗೆ ಅವಶ್ಯವಾಗಿರುವ ಭದ್ರಾವತಿ ತಾಲ್ಲೂಕು ಸಿರಿಯೂರು ಗ್ರಾಮದ ಸ.ನಂ 12 ರಲ್ಲಿನ ಅರಣ್ಯ ಇಲಾಖೆಗೆ ಸೇರಿದ 11-34 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಪರ್ಯಾಯವಾಗಿ ಜಮೀನು ಮಂಜೂರಾತಿ ಮಾಡುವ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದಲ್ಲಿ ವಿಮಾನ ನಿಲ್ದಾಣದ ರಾತ್ರಿ ವೇಳೆ ಕಾರ್ಯಾಚರಣೆಗೆ ಅವಶ್ಯವಾಗಿರುವ ಹೆಚ್ಚುವರಿ ಜಮೀನಿಗೆ ಪರ್ಯಾಯವಾಗಿ ಜಮೀನು ಮಂಜೂರಾತಿ ಮಾಡುವ ಕುರಿತು ಭದ್ರಾವತಿ ತಾಲ್ಲೂಕು ಸಿರಿಯೂರು ಗ್ರಾಮದ ಸ.ನಂ 12 ರಲ್ಲಿನ ಅರಣ್ಯ ಇಲಾಖೆಗೆ ಸೇರಿದ 11-34 ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿದ್ದು, ಪರ್ಯಾಯವಾಗಿ ಕಂದಾಯ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗಿದ್ದು ಅದರಂತೆ ಈ ಸಂಬಂಧ ಈ ಹಿಂದೆ ಭದ್ರಾವತಿ ತಾಲ್ಲೂಕು ಹೊಸೂರು ಗ್ರಾಮದ ಸ.ನಂ 23 ರಲ್ಲಿ 9.38 ಎಕರೆ ಮತ್ತು ಸ.ನಂ 15 ರಲ್ಲಿ 2.02 ಎಕರೆ ಜಮೀನಿನ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾಪಿತ ಜಮೀನು ಎರಡು ಸ.ನಂ ಗಳಲ್ಲಿ ಇದ್ದು ಸಂರಕ್ಷಣೆ ದೃಷ್ಟಿಯಿಂದ ಒಂದೇ patch/Block ನಲ್ಲಿ ಗುರುತಿಸಲು ಸೂಚಿಸಿ Ministry of Environment, Forest & Climate Change, Integrated regional Office, Bangalore ರವರು ಆಕ್ಷೇಪಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರಯುಕ್ತ, ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿ ಎಮ್ಮೆದೊಡ್ಡಿ ಗ್ರಾಮದ ಸ.ನಂ 08 ರ ಸರ್ಕಾರಿ ಬಂಜರು 57-16 ಎಕರೆ ಜಮೀನಿನ ಪೈಕಿ 24-00 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿ ಎಮ್ಮೆದೊಡ್ಡಿ ಗ್ರಾಮದ ಸ.ನಂ 08 ರ ಸರ್ಕಾರಿ ಬಂಜರು ಜಮೀನನ್ನು ಜಂಟಿ ಸ್ಥಳ ತನಿಖೆ ನಡೆಸಿ ಸಂರಕ್ಷಣೆ ದೃಷ್ಟಿಯಿಂದ ಸೂಕ್ತವಲ್ಲ ಎಂಬ ಕಾರಣಕ್ಕಾಗಿ ಎಮ್ಮೆದೊಡ್ಡಿ ಗ್ರಾಮದ ಸ.ನಂ 2, 3, ಮತ್ತು 4 ರ ಸರ್ಕಾರಿ ಜಮೀನು ಸೂಕ್ತ ಎಂಬ ಅರಣ್ಯಾಧಿಕಾರಿಗಳ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸ್ಥಳೀಯ ಕಂದಾಯಾಧಿಕಾರಿಗಳು, ಭೂಮಾಪನ ಮತ್ತು ಅರಣ್ಯ ಇಲಾಖೆಯೊಂದಿಗೆ ಸ್ಥಳ ತನಿಖೆ ಮಾಡಲಾಗಿ ಎಮ್ಮೆದೊಡ್ಡಿ ಗ್ರಾಮದ ಸ.ನಂ 2 ರಲ್ಲಿ 10.01 ಎಕರೆ ಸರ್ಕಾರಿ ಬಂಜರು , ಸ.ನಂ 03 ರಲ್ಲಿ 7.38 ಎಕರೆ ಸರ್ಕಾರಿ ಬಂಜರು


PDF processed with CutePDF evaluation edition www.CutePDF.com

ಮತ್ತು ಸ.ನಂ 04 ರಲ್ಲಿ 7-06 ಎಕರೆ ಒಟ್ಟು 25.05 ಎಕರೆ ಪ್ರದೇಶವು ರಸ್ತೆಯಿಂದ (ಶಿವನಿ-ಭದ್ರಾವತಿ) ಬಲಭಾಗಕ್ಕೆ ಇದ್ದು, ಸದರಿ ಪ್ರದೇಶವು ಅಕ್ಕಪಕ್ಕದ ಸರ್ವೆ ನಂಬರ್ ಗಳಾಗಿದ್ದು ಒಂದಕ್ಕೊಂದು ಹೊಂದಿಕೊಂಡಿದ್ದು ಒಂದೇ patch/Block ಆಗಿರುತ್ತದೆ. ಈ ಮೇಲ್ಕಂಡ ಜಮೀನು ಸಂಪೂರ್ಣವಾಗಿ ಅರಣ್ಯ ಸ್ವರೂಪದಲ್ಲಿರುತ್ತದೆ. ಹಾಗೂ ಈ ಜಮೀನಿನ ಸುತ್ತಲೂ ಸಹ ಆನೆ ಟ್ರಂಚ್ ನ್ನು ಅರಣ್ಯ ಇಲಾಖೆಯವರೇ ತೆಗೆಸಿದ್ದು ಈ ಪ್ರದೇಶವನ್ನೆ ಅರಣ್ಯ ಇಲಾಖೆಯವರು ಪರ್ಯಾಯ ಜಮೀನಾಗಿ ಮಂಜೂರಾತಿಮಾಡಿಕೊಡಲು ಕೋರಿರುತ್ತಾರೆ. ಸದರಿ ಜಮೀನಿನಲ್ಲಿ ಯಾರೂ ಸಹ ಬಗರ್ ಹುಕ್ಕುಂ ಸಾಗುವಳಿ ಮಾಡಿರುವುದಿಲ್ಲ. ಆದಾಗ್ಯೂ ನಮೂನೆ 50, 53 ಮತ್ತು 57 ರಲ್ಲಿ ಅರ್ಜಿ ಸಲ್ಲಿಸಿದ್ದರು ಸಹ ಸದರಿ ಅರ್ಜಿಗಳನ್ನು ಹಿತಾಸಕ್ತಿ ದೃಷ್ಟಿಯಿಂದ ಪರಿಭಾವಿತ ವಿಲೇ ಎಂದು ಪರಿಗಣಿಸಬಹುದಾಗಿದೆ

ಪ್ರಯುಕ್ತ ಭದ್ರಾವತಿ ತಾಲ್ಲೂಕು ಸಿರಿಯೂರು ಗ್ರಾಮದ ಸ.ನಂ 12 ರಲ್ಲಿನ ಅರಣ್ಯ ಇಲಾಖೆಗೆ ಸೇರಿದ 11-34 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಂಡು ಪರ್ಯಾಯವಾಗಿ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿ ಎಮ್ಮೆದೊಡ್ಡಿ ಗ್ರಾಮದ ಸ.ನಂ 2 ರಲ್ಲಿ 10-01 ಎಕರೆ ಸರ್ಕಾರಿ ಬಂಜರು, ಸ.ನಂ 03 ರಲ್ಲಿ 7-38 ಎಕರೆ ಸರ್ಕಾರಿ ಬಂಜರು, ಸ.ನಂ 04 ರಲ್ಲಿ 7-06 ಎಕರೆ ಸರ್ಕಾರಿ ಬಂಜರು ಒಟ್ಟು 25.05 ಎಕರೆ ಸರ್ಕಾರಿ ಬಂಜರು ಕಂದಾಯ ಜಮೀನನ್ನು ಅರಣ್ಯ ಇಲಾಖೆಗೆ ಮಂಜೂರು ಮಾಡಬಹುದಾಗಿದೆ ಎಂದು ವರದಿಯನ್ನು ಸಲ್ಲಿಸಿರುತ್ತಾರೆ.ಮೇಲ್ಕಂಡ ಎಲ್ಲಾ ವರದಿಯ ಆಧಾರದ ಮೇರೆಗೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ

//ಆದೇಶ//

ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದಲ್ಲಿನ ವಿಮಾನ ನಿಲ್ದಾಣದಲ್ಲಿ ರಾತ್ರಿ ವೇಳೆಯ ಕಾರ್ಯಾಚರಣೆಗಾಗಿ ಭದ್ರಾವತಿ ತಾಲ್ಲೂಕು ಸಿರಿಯೂರು ಗ್ರಾಮದ ಸ.ನಂ 12 ರಲ್ಲಿನ ಅರಣ್ಯ ಇಲಾಖೆಗೆ ಸೇರಿದ 11.34 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುವ ಕಾರಣ ಪರ್ಯಾಯವಾಗಿ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿ ಎಮ್ಮೆದೊಡ್ಡಿ ಗ್ರಾಮದ 1) ಸ.ನಂ 2 ರಲ್ಲಿ 10.01 ಎಕರೆ ಸರ್ಕಾರಿ ಬಂಜರು 2) ಸ.ನಂ 3 ರಲ್ಲಿ 7.38 ಎಕರೆ ಸರ್ಕಾರಿ ಬಂಜರು 3) ಸ.ನಂ 04 ರಲ್ಲಿ 7.06 ಎಕರೆ ಸರ್ಕಾರಿ ಬಂಜರು ಒಟ್ಟು 25.05 ಎಕರೆ ಜಮೀನನ್ನು ಮಾನ್ಯ ಸರ್ಕಾರದಿಂದ ಸ್ಥಿರೀಕರಣ ಆದೇಶ ಪಡೆಯುವ ಷರತ್ತಿಗೊಳಪಟ್ಟು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71 ರಡಿಯಲ್ಲಿ ಕಾಯ್ದಿರಿಸಿ ಆದೇಶಿಸಿದೆ.



**<u>ಪ್ರಸ್ತಾಪಿತ ಜಮೀನಿನ ಚೆಕ್ಕುಬಂದಿ ವಿವರ:-</u>**

| | | | |
|---|---|---|---|
| ಉತ್ತರಕ್ಕೆ: | ಸ.ನಂ 1, ಪೂರು | ದಕ್ಷಿಣಕ್ಕೆ | ಸ.ನಂ 08 |
| ಪೂರ್ವಕ್ಕೆ: | ಗಂಗೂರು ಗ್ರಾಮದ ಗಡಿ | ಪಶ್ಚಿಮಕ್ಕೆ | ಸ.ನಂ06 |

ಷರತ್ತುಗಳು:-

1. ಜಮೀನನ್ನುಯಾವ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸ ತಕ್ಕದ್ದಾಗಿದೆ, ಸದರಿ ಉದ್ದೇಶ ಹೊರತು ಪಡಿಸಿ ಬೇರೆ ಉದ್ದೇಶಗಳಿಗೆ ಬಳಸುವಂತಿಲ್ಲ.
2. ಸದರಿ ಉದ್ದೇಶಕ್ಕೆ ವರ್ಗಾಯಿಸಲಾದ ಜಮೀನು ಅವಶ್ಯಕತೆ ಇಲ್ಲವಾದಲ್ಲಿ ಪುನ: ಕಂದಾಯ ಇಲಾಖೆಗೆ ವಾಪಾಸ್ಸು ಪಡೆಯಲು ಅವಕಾಶವಿರುತ್ತದೆ.
3. ಯಾವುದೇ ತಾತ್ಕಾಲಿಕ ಖಾಸಗೀ ಹಕ್ಕುಗಳನ್ನು ಸೃಷ್ಠಿಸುವಂತಿಲ್ಲ.
4. ಕರ್ನಾಟಕ ಭೂಕಂದಾಯ ಕಾಯ್ದೆ 1964 ರಕಲಂ 71 ರ ಪ್ರಕಾರ ಕಾಯ್ದಿರಿಸುವುದು ಒಂದು ವೇಳೆ ಈ ಬಗ್ಗೆ ಈ ಬಗ್ಗೆ ಸಾರ್ವಜನಿಕರಿಂದ ಹಾಗೂ ಇತರೆ ಯವರಿಂದ ತಕರಾರು ಬಂದಿದ್ದಲ್ಲಿ "ಡಿ" ರಿಸರ್ವ್ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

( ಡಾ.ಸೆಲ್ವಮಣಿ.ಆರ್ )
ಜಿಲ್ಲಾಧಿಕಾರಿ,
ಶಿವಮೊಗ್ಗಜಿಲ್ಲೆ, ಶಿವಮೊಗ್ಗ.

ಪ್ರತಿಯನ್ನು:-

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ.
2. ಉಪ-ವಿಭಾಗಾಧಿಕಾರಿಗಳು, ಶಿವಮೊಗ್ಗ ಉಪ-ವಿಭಾಗ, ಶಿವಮೊಗ್ಗ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ.
4. ತಹಶೀಲ್ದಾರ್, ಭದ್ರಾವತಿ ತಾಲ್ಲೂಕು ಇವರಿಗೆ ಸಂಬಂದಪಟ್ಟ ಮೂಲ ಕಡತದೊಂದಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸುತ್ತಾ ಪ್ರಸ್ತಾವನೆಯಲ್ಲಿರುವ ನಕ್ಷೆಯಲ್ಲಿ ನಮೂದಿಸಲಾದ ಜಾಗವನ್ನು ಗಡಿ ಗುರುತಿಸಿ ಸಂಬಂಧಪಟ್ಟ ಅರಣ್ಯ ಇಲಾಖೆಯವರಿಗೆ ಹಸ್ತಾಂತರಿಸಲು ಮತ್ತು ಪಹಣಿ ಪತ್ರಿಕೆಯಲ್ಲಿ ಇಂಡೀಕರಣಗೊಳಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.
5. ಕಛೇರಿ ಪ್ರತಿ.

( ಡಾ. ಸೆಲ್ವಮಣಿ. ಆರ್ )
ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.